ದಿನಾಂಕ 22-09-2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**<u>ಪಾಟಿ ಸವಾಲುಃ ಶ್ರೀ BRP 2 ನೇ ಎದುರುದಾರರ ಪರ ವಕೀಲರಿಂದಃ</u>**

ಅಪಘಾತದ ದಿನದಂದು ನಾನು, ನನ್ನ ಗಂಡ, ನನ್ನ ತಾಯಿ, ನನ್ನ ತಮ್ಮ, ನನ್ನ ತಂದೆ ಹಾಗೂ ನನ್ನ ಮಗ ಎಲ್ಲರೂ ಜೀಪ್ ವಾಹನದಲ್ಲಿ ಅರ್ಜುಣಗಿ ಗ್ರಾಮಕ್ಕೆ ಹೋಗುತ್ತಿದ್ದೆವು. ಸದರಿ ಜೀಪ್ ನನ್ನ ತಮ್ಮನಿಗೆ ಸೇರಿದ್ದು. ಸದರಿ ಜೀಪ್ ವಾಹನ ನನ್ನ ತಮ್ಮನಿಗೆ ಸೇರಿದ್ದು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಜೀಪ್ ವಾಹನವನ್ನು ನನ್ನ ತಮ್ಮ ಸದ್ದಾಮ ಚಾಲನೆ ಮಾಡುತ್ತಿದ್ದ.

ಸದರಿ ಸದ್ದಾಮನಿಗೆ ವಾಹನ ಚಾಲನೆ ಮಾಡಲು ವಾಹನ ಚಾಲನೆ ಪರವಾನಿಗೆ ಪತ್ರ ಇರಲಿಲ್ಲ ಎಂದರೆ ಸಾಕ್ಷಿ ಸದರಿ ಜೀಪ್ ವಾಹನವನ್ನು ನನ್ನ ಗಂಡ ನಬಿ ರಸೂಲರವರು ಚಾಲನೆ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಸದರಿ ಜೀಪ್ ವಾಹನವನ್ನು ನನ್ನ ಗಂಡ ಚಾಲನೆ ಮಾಡುತ್ತಿದ್ದ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಅಪಘಾತವು ಜೇವರ್ಗಿಯ ಸಿಂದಗಿ ಬೈಪಾಸ್ ರಸ್ತೆಯಲ್ಲಿ ಆಗಿರುತ್ತದೆ. ಅಪಘಾತವಾದ ಮೂರು ದಿನದ ನಂತರ ದೂರನ್ನು ಸಲ್ಲಿಸಿರುತ್ತೇನೆಂದರೆ ನಿಜ. ಸಾಕ್ಷಿ ಮುಂದುವರೆದು ನನಗೆ ತೀವ್ರ ಸ್ವರೂಪದ ಗಾಯಗಳಾಗಿದ್ದು ನನ್ನ ಸ್ಥಿತಿ ಚಿಂತಾಜನಕವಾಗಿದ್ದು ಆದ್ದರಿಂದ ವಿಳಂಬವಾಗಿರುತ್ತದೆಂದು ನುಡಿಯುತ್ತಾರೆ. ಸದರಿ ಜೀಪ್ ವಾಹನದಲ್ಲಿ ನಮ್ಮ ಪರಿಚಯದವರು ಸಹ ಪ್ರಯಾಣಿಸುತ್ತಿದ್ದರು ಅವರ ಹೆಸರು ನೆನಪಿಗೆ ಬರುತ್ತಿಲ್ಲ. ಸದರಿ ನನ್ನ ಪರಿಚಯದವರು ಸಿಂದಗಿವರೆಗೆ ಬರುತ್ತೇನೆ ಅಂತಾ ಹೇಳಿದ್ದರಿಂದ ಅವರನ್ನೂ ಸಹ ಜೀಪಿನಲ್ಲಿ ಕರೆದುಕೊಂಡು ಹೋಗಿರುತ್ತೇವೆ. ನಮ್ಮ ತಾಯಿಗೆ ಸೇರಿದ

ಸ್ವತ್ತನ್ನು ಮಾರಾಟ ಮಾಡುವ ಉದ್ದೇಶದಿಂದ ನಾವು ಅರ್ಜುಣಗಿಗೆ ಹೋಗುತ್ತಿದ್ದೆವು. ಅಪಘಾತದ ದಿನದಂದು ನಮ್ಮ ಜೀಪ್ ವಾಹನವನ್ನು ಸದ್ದಾಮರವರೇ ಚಾಲನೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಜೀಪ್ ವಾಹನವನ್ನು ನಾವು ಆ ದಿನ ಬಾಡಿಗೆ ಮೇಲೆ ತೆಗೆದುಕೊಂಡು ಅದರಲ್ಲಿ ಪ್ರಯಾಣಿಸುತ್ತಿದ್ದೆವು ಎಂದರೆ ಸರಿಯಲ್ಲ. ಅಪಘಾತದ ದಿನದಂದು ಸದರಿ ವಾಹನದಲ್ಲಿ ಬೇರೆ ಜನಾಂಗಕ್ಕೆ ಸೇರಿದ ಜನರು ಸಹ ಪ್ರಯಾಣಿಸುತ್ತಿದ್ದರು ಎಂದರೆ ಸರಿಯಲ್ಲ. ನಿಪಿ-1 ರ ದೂರಿನ ಪ್ರಕಾರ ನಮ್ಮೊಂದಿಗೆ ಶ್ರೀಮಂತ ದೊಡ್ಮನಿ, ಶರಣಪ್ಪ  ಹಾಗೂ ನಿಂಗಮ್ಮರವರೂ ಸಹ ಸದರಿ ಜೀಪ್ ವಾಹನದಲ್ಲಿ ಪ್ರಯಾಣಿಕರಾಗಿ ಬಾಡಿಗೆಯ ಮೇಲೆ ಸದರಿ ವಾಹನದಲ್ಲಿ ಪ್ರಯಾಣಿಸುತ್ತಿದ್ದರು ಎಂದರೆ ಸರಿಯಲ್ಲ.

ನನ್ನ ತಂದೆಯ ಹೆಸರು ಅಂಜುಮ್ ಸಾಬ್. ನನಗೆ ಆದಂತಹ ಗಾಯಗಳು ವಾಸಿಯಾಗಿದ್ದು ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿಯಲ್ಲ. ನಾನು ಹೊಟೇಲ್ ನಡೆಸಲು ಲೈಸೆನ್ಸನ್ನು ಪಡೆದುಕೊಂಡಿರುತ್ತೇನೋ ಇಲ್ಲವೋ ಆ ಬಗ್ಗೆ ನನಗೆ ಗೊತ್ತಿಲ್ಲ. ನಾನು ಸದರಿ ಹೊಟೇಲ್ ವ್ಯಾಪಾರದಿಂದ ಪ್ರತಿ ತಿಂಗಳು ರೂ.35,000/- ಆದಾಯ ಗಳಿಸುತ್ತಿದ್ದೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿದ ವೈದ್ಯಕೀಯ ಬಿಲ್ಲುಗಳನ್ನು ಈ ಪ್ರಕರಣಕ್ಕೆ ಸಹಾಯವಾಗಲೆಂದು ಸೃಷ್ಟಿಸಿಕೊಂಡು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ.

ಅಪಘಾತದ ದಿನದಂದು ಸದರಿ ವಾಹನವನ್ನು ಯಾರು ಚಾಲನೆ ಮಾಡುತ್ತಿದ್ದರೆಂದು ಈಗ ನೆನಪಿಗೆ ಬರುತ್ತಿಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ.ಇದೆ.

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು, ಜೇವರ್ಗಿ